ಶ್ರೀ ಜಿ. ರಾಮಕೃಷ್ಣ.—ಆಗಬಹುದು. ಈ ಬಿದರನ ಹಳ್ಳಿ ಪ್ರಕರಣದಲ್ಲಿ ಮಾನ್ಯ ಮಂತ್ರಿಗಳಿಂ ಕೊಟ್ಟ ಹೇಳಿಕೆ ಈ ರೀತಿ ಇದೆ.—

"ದಿನಾಂಕ ೬-೮-೧೯೬೭ ರಂದು ೧೧-೦೦ ಗಂಟೆ ಸಮಯದಲ್ಲಿ ಬಿದರನಹಳ್ಳಿಯ ಮಹದೇವ ಹಿರೇಕೋಡಿ ಅವರ ಪತ್ನಿ ಶ್ರೀಮತಿ ಲಕ್ಷ್ಮೀಬಾಯಿ, ವಯಸ್ಸು ೧೬ ವರ್ಷ ಲಿಂಗಾಯಿತ ಕೋಮಿನವರು, ಹಳ್ಳಿಯ ಹೊರಗಡೆ ಕಾಲ ಪ್ರವೃತ್ತಿಗೆ ಹೋಗಂತ್ತಿದ್ದಾಗ ಸದಾಶಿವ ಲೋಕುಲಿಮಾವರ ಮಗ ಕುಮಾರ ವಯಸ್ಸು ೧೯, ಎಂಬುವರು, ಹರಿಜನ ಕೋಮಿಗೆ ಸೇರಿದವನ್ನು, ಲಕ್ಷ್ಮೀಬಾಯಿಯವರ ಶೀಲ ಭಂಗ ಮಾಡಿದನು;"

ಇದನ್ನು ನೋಡಿದಾಗ ನಿಜಕ್ಕೂ ಕಣ್ಣಿನಲ್ಲಿ ನೀರು ಬರುತ್ತದೆ. ಇಂತಹ ಪ್ರಕರಣ ಬೇರೆ ದೊಡ್ಡ ಸ್ಥಾನದಲ್ಲಿರುವವರ ಅಕ್ಕತಂಗಿಯರ ಮೇಲೆ ಏನಾದರು ನಡೆದಿದ್ದರೆ ಅವರು ತಮ್ಮ ಸ್ಥೈರ್ಯವನ್ನು ಕಳೆದುಕೊಂಡು ಏನು ಬೇಕಾದರೂ ಮಾಡುತ್ತಿದ್ದರು. ಆದರೆ ಈ ಜನರು ಮಾತ್ರ ಇಂಥಾದ್ದನ್ನೆಲ್ಲಾ ಸಹಿಸಿಕೊಂಡು ಹಳ್ಳಿಗಳಲ್ಲಿ ಜೀವನ ಮಾಡುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇಂತಹ ಅನ್ಯಾಯಗಳು, ಅತ್ಯಾಚಾರಗಳು ಕೆಲವೊಂದು ಸಂದರ್ಭದಲ್ಲಿ ನಡೆಯುತ್ತದೆ. ಹಳ್ಳಿಗಳಲ್ಲಿ ಹೆಣ್ಣುಮಕ್ಕಳನ್ನು ಬೆತ್ತಲೆಮಾಡಿ ಊರೆಲ್ಲಾ ತಿರುಗಿಸಿದಮೇಲೆ ಅವರು ಯಾವರೀತಿ ಮಾನ ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕು. ಯಾರು ಅವರ ಮಾನ ಮರ್ಯಾದೆಯನ್ನು ಕಾಪಾಡತಕ್ಕವರು ಎನ್ನುವ ಭಾವನೆಯಿಂದ ಇಟ್ಟುಕೊಂಡು ಬಾಳಬೇಕು. ಸರ್ಕಾರ ಕಣ್ಣಿತ್ತಿ ನೋಡಬೇಕು. ಆದನ್ನು ಬಿಟ್ಟು ಯಾವುದೋ ಹಳ್ಳಿಯಲ್ಲಿ ಯಾರೋ ಹೆಣ್ಣುಮಗಳಿಗೆ ಅತ್ಯಾಚಾರ, ಅನ್ಯಾಯ ಬಲಾತ್ಕಾರ ಮಾಡಿದರೆ ಏನಾಯಿತು ಎಂದು ಸರ್ಕಾರ ನಡೆಯುವುದಾದರೆ ಅದು ಸರಿಯಾದುದಲ್ಲ. ಹೀಗೆ ಇದ್ದರೆ ಸರ್ಕಾರ ಜನ ಇಂದಲ್ಲ ನಾಳೆ ಎದ್ದೇಳುತ್ತಾರೆ, ಭ್ರಷ್ಟಾಚಾರ, ಅತ್ಯಾಚಾರದ ವಿರುದ್ಧ ಹೋರಾಡತಕ್ಕ ಶಕ್ತಿಸಾಮರ್ಥ್ಯವನ್ನು ಪಡೆಯುತ್ತಾರೆ. ಆದ್ದರಿಂದ ದಯಮಾಡಿ ಸರ್ಕಾರ ಬಹಳಷ್ಟು ಗಂಭೀರವಾಗಿ ವಿಚಾರಮಾಡಿ ಈ ಜನಗಳ ಮೇಲೆ ಆಗತಕ್ಕಂಥ ಅನ್ಯಾಯಗಳನ್ನು ಅತ್ಯಾಚಾರಗಳನ್ನು ತಡೆಗಟ್ಟಬೇಕು, ಸಂಬಂಧಪಟ್ಟವರ ಮೇಲೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನುಗಳನ್ನು ಮಾಡಬೇಕು. ಅಂತಹವರ ಮೇಲೆ ಕ್ರಮ ತೆಗೆದು ಕೊಂಡು ರಾಜ್ಯದಲ್ಲಿ ಇಂತಹ ಘಟನೆಗಳು ಆಗಲಾರದಂತೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅಲ್ಲದೆ ನಮ್ಮ ನಾಯಕರು ಹೇಳಿದ ಪ್ರಕಾರ ಈ ಬಗ್ಗೆ ಸದನದ ಸಮಿತಿಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ವರದಿಯ ಮಂಡನೆ

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಪಿ. ಕೆ. ವ್ಯಾಪಸಂದರ್ ಕಮಿಷನ್ ಆಫ್ ಎಕ್ವೈರಿ ರಿಪೋರ್ಟನ್ನು ಮೈಸೂರಾಂಡಂ ಅನ್ನು ಈ ಮನೆಯ ಮುಂದೆ ಇಡುತ್ತಾ ಇದ್ದೇನೆ.

ಉಪಾಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು.

ಅಲ್ಪಕಾಲಾವಧಿ ಚರ್ಚೆ (ಮುಂದುವರಿದುದು)

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಈ ದಲಿತರ ಮೇಲೆ ರಾಜ್ಯದಲ್ಲಿ ನಡೆಯತಕ್ಕಂಥ ದೌರ್ಜನ್ಯಗಳು, ಅತ್ಯಾಚಾರಗಳ ಬಗ್ಗೆ ಆಗುತ್ತಿರುವ ಪ್ರಮುಖವಿವಾದಂಥ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೂ ಕೂಡ ಅವಕಾಶ ಮಾಡಿಕೊಟ್ಟಿದ್ದಕ್ಕೆ ಪ್ರಾರಂಭದಲ್ಲಿ ನಾನು ನಿಮಗೆ ಅಭಿನಂದಿಸುತ್ತೇನೆ. ಈ ವಿಚಾರ ಮೇಲು ನೋಟಕ್ಕೆ ಬಹಳ ಗಂಭೀರ ಸ್ವರೂಪದ್ದಾಗಿ ಕಂಡರೂ ಕೂಡ ನಿಜಕ್ಕೂ ಅಷ್ಟೇ ಸೂಕ್ಷ್ಮವಾದಂಥ ವಿಷಯ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ನಮ್ಮ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಏನಿದೆ ಈ ಧಾರ್ಮಿಕ ಸ್ವತಂತ್ರ್ಯವನ್ನು ಬಹಳಷ್ಟು ದುರುಪಯೋಗ ಮಾಡಿಕೊಳ್ಳತಕ್ಕಂಥ ರಾಜಕಾರಣಿಗಳು ೧೦೦ಕ್ಕೆ ೯೦ ಜನ ಇದ್ದಾರೆ. ನನಗೆ ನೆನಪಿದೆ, ಪಶ್ಚಿಮ ಬಂಗಾಳದ ಮೊನ್ನೆಯ ಚುನಾವಣೆಯಲ್ಲಿ ಪ್ರಧಾನ ಮಂತ್ರಿಗಳೂ ಕೂಡ ಒಂದು ಹೇಳಿಕೆಯನ್ನು